ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಹೌದು.

ಆ) ಹಾಲಿ ಇರುವ ಸಹಾಯಕ ಆರೋಗ್ಯ ಕೇಂದ್ರದ ಜೊತೆಗೆ ಹತ್ತು ಹಾಸಿಗೆಗಳ ಹೆರಿಗೆ ವಿಭಾಗವನ್ನು ಮಂಜೂರು ಮಾಡಲಾಗಿದೆ.

ಇ) ಸ್ಥಳೀಯ ಜನರು ಹೆರಿಗೆ ವಿಭಾಗವನ್ನು ಕಟ್ಟಲು ತಗಲುವ ಖರ್ಚಿನಲ್ಲಿ ಶೇಕಡ ೫೦ ಭಾಗವನ್ನು ಕಟ್ಟಿಸಿದ ನಂತರ ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಅದು ಮುಗಿದ ನಂತರ ಹೆರಿಗೆ ವಿಭಾಗವನ್ನು ಆರಂಭಿಸಲಾಗುವುದು.

ಶ್ರೀ ಪಿ. ಜಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಅಧ್ಯಕ್ಷರೇ, ಯಗಟಿ ಗ್ರಾಮವು ಒಂದು ಮುಖ್ಯ ಕೇಂದ್ರವಾಗಿದ್ದು, ಅಲ್ಲಿ ಮೂರು ವರ್ಷದ ಹಿಂದೆಯೇ ಆರೋಗ್ಯ ವಿಭಾಗವನ್ನು ಮಂಜೂರ್ಮಾಡಿ ಇವೊತ್ತಿನವರೆಗೂ ಕಟ್ಟಡ ಕಟ್ಟುವುದು ನಿಧಾನವಾಗುತ್ತಿದೆ. ಈಗ ಹಂಗಾಮಿ ಕಟ್ಟಡ ಕಟ್ಟುತ್ತಿದ್ದಾರೆ, ಅಲ್ಲಿ ಒಬ್ಬ ಲೇಡಿ ಡಾಕ್ಟರು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿ, ಹೆಣ್ಣು ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಆಸ್ಪತ್ರೆ ಕಟ್ಟಡ ಮುಗಿಯುವುದಕ್ಕೆ ಮೂರು ತಿಂಗಳ ಮುಂಚೆಯೇ ಸ್ಟಾಫ್ ಬಗ್ಗೆ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬರೆಯಬೇಕು. ಅಲ್ಲಿನ ಕಟ್ಟಡಕ್ಕೆ ಬರಬೇಕಾದ ಶೇಕಡ ೫೦ ಭಾಗ ಹಣ ಇನ್ನೂ ಬಂದಿಲ್ಲ. ಇದು ಇಲ್ಲದಿದ್ದರೆ ಆರ್ಥಿಕ ಶಾಖೆಯವರ ಸ್ಟಾಫ್‌ಗೆ ಸ್ಯಾಂಕ್ಷನ್ ಕೊಡುವುದಿಲ್ಲ. ಆದ್ದರಿಂದ ಆದಷ್ಟು ಬೇಗ ದುಡ್ಡನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ. ಅನಂತರ ಆರ್ಥಿಕ ಇಲಾಖೆಯವರಿಂದ ಸ್ಟಾಫ್ ಮಂಜೂರ್ಮಾಡಲಾಗುತ್ತದೆ.

ಕುಂದಾಪುರ ತಾಲ್ಲೂಕಿನ ಕುಂಭಾಶಿಯಲ್ಲಿನ ಆರೋಗ್ಯ ಘಟಕಕ್ಕೆ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿ ಬಲ.

೭೭೦. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಕುಂಭಾಶಿ ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆಯ ಬಲವೆಷ್ಟು, (ದರ್ಜೆವಾರು ವಿವರ ನೀಡುವುದು) ?

ಆ) ಅಲ್ಲಿ (ಕಂಭಾಶಿ ಪ್ರಾಥಮಿಕ ಆರೋಗ್ಯ ಘಟಕದ) ಕೊರತೆಯಿರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ?

ಇ) ಈ ಕೊರತೆಯನ್ನು ಸರ್ಕಾರದವರು ಆದಷ್ಟು ಬೇಗನೆ ಸರಿಪಡಿಸುವರೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ವೈದ್ಯಾಧಿಕಾರಿ	೧
ಔಷಧಿ ವಿತರಕರು	೧
ಕಿರಿಯ ಆರೋಗ್ಯ ಸಹಾಯಕಿ	೨
ಗ್ರೂಪ್ 'ಡಿ'	೨
ಆ) ವೈದ್ಯಾಧಿಕಾರಿ	೧
ಕಿರಿಯ ಆರೋಗ್ಯ ಸಹಾಯಕಿ	೧

ಇ) ಖಾಲಿ ಹುದ್ದೆಗಳನ್ನು ಆದಷ್ಟು ಬೇಗನೆ ತುಂಬಲಾಗುವುದು.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಘಟಕಗಳಲ್ಲಿ ವೈದ್ಯರುಗಳ ಕೊರತೆ ಇದ್ದರೂ, ಹೊಸ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುವುದು ಸರ್ಕಾರದ ಉದ್ದೇಶವೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಈಗಾಗಲೇ ೧೫೦ ಜನ ವೈದ್ಯರುಗಳ ಸಂದರ್ಶನ ಪಿ. ಎಸ್. ಸಿ ಮಂಜೂರಾತಿಯಲ್ಲಿ ಆಗಬೇಕಾಗಿದೆ. ಅದು ೧೫ನೇ ತಾರೀಖು ಮುಗಿದು, ಈ ತಿಂಗಳ ಕೊನೆಯೊಳಗೆ ಈ ಖಾಲಿ ಜಾಗಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಹೊಸ ಆಸ್ಪತ್ರೆಗಳನ್ನು, ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುವ ಮುಂಚೆ, ಖಾಲಿ ಇರತಕ್ಕ ಕೇಂದ್ರಗಳಿಗೆ ವೈದ್ಯರುಗಳನ್ನು ನೇಮಕ ಮಾಡಬೇಕು.

ಅಧ್ಯಕ್ಷರು.—ಈ ತಿಂಗಳ ಕೊನೆಯೊಳಗೆ ಎಂದು ಹೇಳಿದ್ದಾರೆ ಬಿಡಿ. ನಿಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತಾರೆ.

ಚುಕ್ಕಿ ಪ್ರಶ್ನೆ ೫೭೦ (೬೧೩)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೧ (೧೬೩೭)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೨ (೪೫೬)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೩ (೧೪೦೧)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.—ಇನ್ನೊಮ್ಮೆ ಪ್ರಶ್ನೋತ್ತರ ಪಟ್ಟಿಯಲ್ಲಿ ಗೈರು ಹಾಜರಾದವರನ್ನು ಕರೆಯುತ್ತೇನೆ. ಶ್ರೀಯುತರಾದ :

೧)	ಹೆಚ್. ಸಿ. ಮಹದೇವಪ್ಪ (ಟಿ. ನರಸೀಪುರ)	ಗೈರು ಹಾಜರಿ
೨)	ಬಿ. ನಾರಾಯಣಸ್ವಾಮಿ (ಬಾಗೇಪಲ್ಲಿ)	–,,–
೩)	ಸಿ. ಎನ್. ಭಾಸ್ಕರಪ್ಪ (ಬೆಳ್ಳಾವಿ)	–,,–
೪)	ಎ. ತಿಪ್ಪೇಸ್ವಾಮಿ (ಚಳ್ಳಕೆರೆ)	–,,–
೫)	ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)	–,,–
೬)	ಲೀಲಾದೇವಿ ಆರ್. ಪ್ರಸಾದ್ (ಅಥಣಿ)	–,,–
೭)	ಮುಕ್ತಾರ್‌ನ್ನೀಸ (ನರಸಿಂಹರಾಜ)	–,,–
೮)	ಎಂ. ಎಲ್. ಮುತ್ತಣ್ಣನವರ್ (ಗೋಕಾಕ್)	–,,–
೯)	ಜಿ. ಎಸ್. ಆಚಾರ್ (ಬೈಂದೂರು)	–,,–
೧೦)	ಬಿ. ಜಿ. ಕೊಟ್ರಪ್ಪ (ಹರಿಹರ)	–,,–

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ಟಿ. ನರಸೀಪುರದ ತಿರುಮಕೂಡ್ಲು ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

೧೩೨೨. ಶ್ರೀ ಹೆಚ್. ಸಿ. ಮಹದೇವಪ್ಪ (ಟಿ.ನರಸೀಪುರ).—ಮಾನ್ಯ ಪಾರ್ಟಿ ಯುವ ಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?